Size : 16x3

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಪ್ರಕಟಣೆ

### ರಾಜ ಕಾಲುವೆ ಮತ್ತು ಕೆರೆ ಒತ್ತುವರಿಯನ್ನು ಸ್ವಯಂ ಪ್ರೇರಣೆಯಿಂದ ತೆರವುಗೊಳಿಸಲು ಮನವಿ

ಇತ್ತೀಚಿನ ಭಾರಿ ಮಳೆಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಆದ ಅನಾಹುತಗಳು ಸ್ವತಃ ಹಾಗೂ ಮಾಧ್ಯಮದ ಮುಖಾಂತರ ಸವಿವರವಾಗಿ ಸಾರ್ವಜನಿಕರಿಗೆ ತಿಳಿದ ವಿಷಯವಾಗಿರುತ್ತದೆ. ಅನಾದಿಕಾಲದಿಂದಲೂ ಅಸ್ತಿತ್ವದಲ್ಲಿದ್ದ ಕೆರೆ, ಕುಂಟೆ ಹಾಗೂ ರಾಜ ಕಾಲುವೆಗಳ ಒತ್ತುವರಿಯೇ ಈ ಅನಾಹುತಕ್ಕೆ ಕಾರಣವೆಂಬುದನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಲು ಬಿಬಿಎಂಪಿಯು ಸತತವಾಗಿ ಪ್ರಯತ್ನಿಸುತ್ತಿದೆ.

ಮಳೆಯ ನೀರು ಸರಾಗವಾಗಿ ಹರಿಯಲು ಹಾಗೂ ಸೂಕ್ತವಾಗಿ ಸಂಗ್ರಹವಾಗಲು ಅನುಕೂಲವಾಗುವಂತೆ ನೀರಿನ ಹರಿವಿಗಾಗಿ ಸೂಕ್ತ ನಾಲಾ ವ್ಯವಸ್ಥೆಯು ಪ್ರಕೃತಿದತ್ತವಾಗಿ ನಿರ್ಮಾಣವಾಗಿರುವುದನ್ನು ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಮೂಲ ದಾಖಲೆಗಳಲ್ಲಿ ಕಾಣಬಹುದಾಗಿದೆ. ಸದರಿ ನಾಲಾಗಳಲ್ಲಿ ನೀರು ಹರಿಯುವ ಸಾಮರ್ಥ್ಯಕ್ಕೆ ಅನುಗುಣವಾಗಿ ಅಳತೆ ರೂಪದಲ್ಲಿ ಪ್ರೈಮರಿ, ಸೆಕೆಂಡರಿ ಹಾಗೂ ಟರ್ಷರಿ ನಾಲಾ ವ್ಯವಸ್ಥೆಯನ್ನು ರೆವಿನ್ಯೂ ನಕ್ಷೆಯಲ್ಲಿ ಅಳವಡಿಸಲಾಗಿದೆ. ಇಂತಹ ಪ್ರಕೃತಿದತ್ತವಾದ ನಾಲಾ ವ್ಯವಸ್ಥೆಯ ಪಥ ಬದಲಿಸುವುದು ಮತ್ತು ಒತ್ತುವರಿ ಮಾಡುವುದು ಕಾನೂನು ವಿರೋಧಿ ಕ್ರಮವಾಗಿದ್ದು, **ಕೆಎಂಸಿ ಕಾಯ್ದೆ 1976ರ ಪರಿಚ್ಛೇದ 288 (ಎ)(ಡಿ)** ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೇಲ್ಕಂಡ ನಾಲಾ ವ್ಯವಸ್ಥೆ ಹಾಗೂ ಕೆರೆಯ ವಿಸ್ತೀರ್ಣದಲ್ಲಿನ ಅತಿಕ್ರಮಣವನ್ನು ಯಾವುದೇ ನೋಟೀಸ್‌ನ್ನು ಜಾರಿಮಾಡದೆ ತೆರವುಗೊಳಿಸಲು ದೃಢ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಮೇಲೆ ವಿವರಿಸಿದ ಅಂಶಗಳ ಆಧಾರದ ಮೇಲೆ ಸಂಬಂಧಿಸಿದ ಒತ್ತುವರಿದಾರರು ಸ್ವಪ್ರೇರಣೆಯಿಂದ ಅತಿಕ್ರಮಣ ಪ್ರದೇಶವನ್ನು ತೆರವುಗೊಳಿಸಲು ಸೂಚಿಸಿದೆ. ತಪ್ಪಿದಲ್ಲಿ ಬಿಬಿಎಂಪಿ ವತಿಯಿಂದ ಆ ಪ್ರದೇಶವನ್ನು ತೆರವುಗೊಳಿಸಿ ಅದಕ್ಕೆ ತಗಲುವ ವೆಚ್ಚವನ್ನು ಸಂಬಂಧಿಸಿದ ಒತ್ತುವರಿ / ಅಭಿವೃದ್ಧಿದಾರರಿಂದ ವಸೂಲಿ ಮಾಡಲಾಗುವುದು.

**ಸಹಿ/- ಆಯುಕ್ತರು**

Size : 16x3

Bruhat Bangalore Mahanagara Palike

# PUBLIC NOTICE

## APPEAL TO VOLUNTARILY REMOVE ENCROACHMENTS ON STORM WATER DRAINS AND LAKES

The citizens of Bengaluru are aware, have seen for themselves as well as through media reports the damages and loss of properties within the jurisdiction of Bruhat Bengaluru Mahanagara Palike during the recent heavy rains. The BBMP has consistently brought to the notice of the citizens that encroachment of lakes and storm water drains has been the main reason for such incidents.

The documents of the Revenue Department, Government of Karnataka indicate the canal systems which have been formed naturally from time immemorial and have enabled collection and free flow of rain water. The said canals/drains have been classified as primary, secondary and tertiary canals in the revenue maps. Changing the direction of flow of water and/or encroaching such naturally formed canal systems is an illegal act. Hence a firm decision has been taken for removal of such encroachments as empowered under the **KMC Act 1976, Section 288(a)(d)** without issuing any notices.

Therefore encroachers of such properties and land developers are hereby informed to voluntarily remove all such encroachments. Failure to comply with this appeal will result in forceful removal of all such encroachments and the expenses towards such action will be recovered from the concerned encroachers and realtors/property developers.

**Sd/- Commissioner**